

# ಗಿನ್ನೆಸ್ ಹೂಜಿ!



ರಾಜಸ್ತಾನದ ಜೈಪುರದಲ್ಲಿರುವ ಮಹಾರಾಜರ ಸಿಟಿ ಪ್ಯಾಲೇಸ್‌ನಲ್ಲಿ ಬೆಳ್ಳಿಯಿಂದ ಮಾಡಿರುವ ಎರಡು ಬೃಹತ್ ಗಾತ್ರದ ನೀರಿನ ಹೂಜಿಗಳನ್ನಿರಿಸಲಾಗಿದೆ. ಗಂಗಾಜಾಲಿ ಎಂದು ಕರೆಯುವ ಇವುಗಳ ವಿಶೇಷ ಏನು ಗೊತ್ತೇ?

ಶುದ್ಧ ಬೆಳ್ಳಿಯಿಂದ ತಯಾರಿಸಿರುವ ಪ್ರತಿಯೊಂದು ಹೂಜಿಯು 345 ಕಿಲೋಗ್ರಾಂ ತೂಕವನ್ನು ಹೊಂದಿದ್ದು, 5 ಅಡಿ 2 ಇಂಚುಗಳಷ್ಟು ಉದ್ದ ಹಾಗೂ 14 ಅಡಿ 10 ಇಂಚುಗಳ ಸುತ್ತಳತೆಯನ್ನು ಹೊಂದಿದೆ. ತಲಾ 4000 ಲೀಟರ್ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವ ಈ ಹೂಜಿಗಳಲ್ಲಿ ಪವಿತ್ರ ಗಂಗೆಯ ನೀರನ್ನು ತುಂಬಿಸಿ ಮಹಾರಾಜರ ಸ್ವಂತ ಬಳಕೆಗೆ ಉಪಯೋಗಿಸಲಾಗುತ್ತಿತ್ತಂತೆ. ಇವುಗಳನ್ನು ಎರಡು ವರ್ಷಗಳ (1894 ಹಾಗೂ 1896) ಅವಧಿಯಲ್ಲಿ ಜೈಪುರದ ಅರಮನೆಯಲ್ಲಿದ್ದ ಪರಿಣಿತ ಬೆಳ್ಳಿ ಕೆಲಸಗಾರರು 14,000 ಅಪ್ಪಟ ಬೆಳ್ಳಿ ನಾಣ್ಯಗಳನ್ನು ಕರಗಿಸಿ ತಯಾರಿಸಿದ್ದಾರೆ.

ಮಹಾರಾಜಾ ಎರಡನೇ ಮಾಧೋ ಸಿಂಗ್ 1902 ರಲ್ಲಿ ಏಳನೆಯ ಎಡ್ವರ್ಡ್‌ನ ಕಿರೀಟಧಾರಣ ಮಹೋತ್ಸವಕ್ಕೆ ಲಂಡನ್ ನಗರಕ್ಕೆ ಭೇಟಿಯಿತ್ತಾಗ ಆತನ ನಿರ್ದೇಶನದಂತೆ ಈ ಎರಡೂ ಹೂಜಿಗಳನ್ನು ತೆಗೆದುಕೊಂಡು ಹೋಗಿದ್ದರಂತೆ. ಮಹಾನ್ ಹಿಂದೂ ಧರ್ಮ ಪರಿಪಾಲಕನಾಗಿದ್ದ ಮಾಧೋಸಿಂಗ್ ಮಹಾರಾಜನು ಯೂರೋಪ್ ದೇಶದ ನೀರು ಕುಡಿಯಲು ಯೋಗ್ಯವಲ್ಲವೆಂದು ಭಾವಿಸಿದ್ದರಿಂದ ಮಹಾರಾಜನ ಲಂಡನ್ ಪ್ರವಾಸದ ಸಮಯದಲ್ಲಿ ಗಂಗಾ ನದಿಯ ನೀರನ್ನು ಅವೆರಡೂ ಹೂಜಿಗಳಲ್ಲಿ ತುಂಬಿಸಿಕೊಂಡು ಹಡಗಿನಲ್ಲಿ ಕೊಂಡೊಯ್ಯಲಾಗಿತ್ತಂತೆ.

ಅದೃಷ್ಟವಶಾತ್ ತೆಗೆದುಕೊಂಡು ಹೋಗಿದ್ದ ಒಟ್ಟು 8000 ಲೀಟರ್‌ನಷ್ಟು ಗಂಗಾಜಲವು ಮಹಾರಾಜನ ಲಂಡನ್ ನಗರದ ಮೂರು ತಿಂಗಳಿನ ಕಿರು ಭೇಟಿಯ ಅವಧಿಗೆ ಸಾಕಾಯಿತಂತೆ. ಇಡೀ ವಿಶ್ವದಲ್ಲಿಯೇ ಅತ್ಯಂತ ಭಾರವಾಗಿರುವ ಬೆಳ್ಳಿಯ ಸಾಧನ ಎಂಬ ಗಿನ್ನೆಸ್ ವಿಶ್ವದಾಖಲೆಯ ಹಿರಿಮೆಗೆ ಪಾತ್ರವಾಗಿದೆ.

■ **ಪ್ರಿಯಾಂಕ ವಿ.ಹೆಚ್.**